

ಗೆ **ಪ್ರಕಟಣೆಯ ಕೃಪೆಗಾಗಿ**

ಸಂಪಾದಕರು/ವರದಿಗಾರರು,

_________________________ ಕನ್ನಡ ದಿನಪತ್ರಿಕೆ

ರಾಣೇಬೆನ್ನೂರು-581 115

ಮಾನ್ಯರೆ,

**ದಿನಾಂಕ: 22-09-2017 ರಂದು ಮೈಸೂರು ದಸರಾ 2017 ರ ಸಾಂಸ್ಕೃತಿಕ ಕಾರ್ಯಕ್ರಮದ " ಯುವಸೌರಭ" ದಲ್ಲಿ ಸಂಗೀತ ಕಾರ್ಯಕ್ರಮ ನೀಡಲಿರುವ ರಾಣೇಬೆನ್ನೂರು ಯುವಕಲಾವಿದೆ ಕು.ರಜನಿ.ಎಲ್.ಕರಿಗಾರ.**

ರಾಣೇಬೆನ್ನೂರು ನಗರದ ಕು.ರಜನಿ ಎಲ್. ಕರಿಗಾರ, ಹಿಂದುಸ್ತಾನಿ ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಕ್ಷೇತ್ರದಲ್ಲಿ ಬೆಳೆಯುತ್ತಿರುವ ಯುವ ಪ್ರತಿಭೆ. ಈಗಾಗಲೇ ನಾಡಿನ ಅನೇಕ ಕಡೆಗಳಲ್ಲಿ ತನ್ನ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತ ತನ್ನದೇ ಅಭಿಮಾನಿ ಬಳಗವನ್ನು ಹೊಂದಿರುತ್ತಾಳೆ. ಪ್ರಸ್ತುತ ಬಿ.ಎಸ್ಸಿ ಪದವಿ ವ್ಯಾಸಂಗ ಮಾಡುತ್ತಿರುವ ಈ ಪ್ರತಿಭಾವಂತ ಸಂಗೀತ ಕಲಾವಿದೆ, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ವಿದ್ವತ್ ಪೂರ್ವ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಸುಗಮ ಸಂಗೀತದಲ್ಲಿ ವಚನ ಸಂಗೀತ, ದಾಸರ ಪದ, ಭಕ್ತಿಗೀತೆಗಳು ಸುಪ್ರಸಿದ್ದ ಕವಿಗಳ ಕವಿತೆಗಳಿಗೆ ರಾಗಸಂಯೋಜಿಸಿ ಪ್ರಸ್ತುತಪಡಿಸಿರುತ್ತಾರೆ . ಸ್ವತ: ಹಾರ್ಮೋನಿಯಂ ವಾದಕಿಯಾಗಿ ತನ್ನ ಸಂಗೀತ ಕಾರ್ಯಕ್ರಮವನ್ನು ನೀಡುತ್ತಿದ್ದು ಕೇಳುಗರಿಗೆ ಸಂಗೀತದ ಆಸಕ್ತಿ ಮೂಡಿಸುತ್ತಿರುವುದು ತುಂಬಾ ಮೆಚ್ಚುವ ವಿಷಯವಾಗಿದೆ. ಇವರ ಸಂಗೀತ ಪ್ರತಿಭೆಯನ್ನು ಮೆಚ್ಚಿ ಹಾವೇರಿಯ ಶ್ರೀ ಹೊಸಮಠದ ಶ್ರೀಗಳವರಿಂದ, ಶಿಕಾರಿಪುರದ ವಿರಕ್ತಮಠದ ಶ್ರೀಗಳವರಿಂದ ನೆಗಳೂರ ಹಿರೇಮಠದ ಸ.ಬ್ರ.ಶ್ರೀ ಗುರುಶಾಂತೇಶ್ವರ ಶ್ರೀಗಳವರಿಂದ, ಶ್ರೀರಂಗಪಟ್ಟಣದ ಶ್ರೀ ದುರ್ದುಂಡೇಶ್ವರ ಮಹಾಂತ ಶಿವಯೋಗಿ ಮಠದ ಶ್ರೀ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಇವರಿಂದ "ಗಾನ ಶಾರದೆ", ಹಾವೇರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅತ್ಯುತ್ತಮ ಸಂಗೀತ ಕಲಾವಿದೆ ಎಂಬ ಪ್ರಶಂಶೆಗೆ ಪಾತ್ರಳಾಗಿರುತ್ತಾಳೆ.

ಹಾವೇರಿ ಜಿಲ್ಲಾ ಉತ್ಸವ, ಸಂಸ್ಕೃತಿ ದರ್ಪಣ – 2017, ಕನ್ನಡನುಡಿ ಹಬ್ಬ-2017, ಹಾಗೂ ದಿನಾಂಕ: 28-06-2017 ರಂದು ಉಡುಪಿಯ ಶ್ರೀ ಕೃಷ್ಣಮಠದಲ್ಲಿ ಶ್ರೀ ಕೃಷ್ಣನ ಬಗ್ಗೆ ರಚಿಸಿದ ದಾಸಶ್ರೇಷ್ಠರ ಭಕ್ತಿಗೀತೆಗಳ ಸಂಗೀತವನ್ನು ನೀಡಿದ್ದಕ್ಕಾಗಿ **ಶ್ರೀಮಠದ ಪೂಜ್ಯರಾದ ಪರಮಪೂಜ್ಯ ವಿಶ್ವೇಶತೀರ್ಥ ಪಾದಂಗಳವರಿಂದ ಪ್ರಶಂಶೆ ಹಾಗೂ ಪುರಸ್ಕಾರ ಪಡೆದಿದ್ದಾರೆ.."** ಶ್ರೀ ಕೃಷ್ಣಾ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ" ಗಂಗಾಪುರ, ತಾ: ರಾಣೇಬೆನ್ನೂರು ಇವರು ಶ್ರೀ ಕೃಷ್ಣಜನ್ಮಾಷ್ಟಮಿ ನಿಮಿತ್ಯ ಏರ್ಪಡಿಸಿದ ಕಾರ್ಯಕ್ರಮದಲ್ಲಿ **" ಸಂಗೀತ ಸರಸ್ವತಿ"** ಎಂಬ ಬಿರುದನ್ನು ನೀಡಿರುವುದು ಇವರ ಸಂಗೀತ ಸಾಧನೆಗೆ ಸಂದ ಗೌರವವಾಗಿದೆ. ರಾಣೇಬೆನ್ನೂರು ಎ.ಬಿ.ವ್ಹಿ.ಪಿ. ವಿವೇಕ ಬ್ಯಾಂಡ ಇವರು **'ಯುವ ಸಂಗೀತ ಪ್ರತಿಭೆ'** ಅಂತಾ ಗುರುತಿಸಿ ವಿಧಾನ ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀ ಕೆ.ಬಿ.ಕೋಳಿವಾಡ, ಹಾಗೂ ಸಂಸದರಾದ ಶ್ರೀ ಶಿವಕುಮಾರ ಉದಾಸಿ ಇವರಿಂದ ಪುರಸ್ಕಾರ ಪಡೆದಿರುತ್ತಾಳೆ.

ಹಾವೇರಿ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ' **'ಜಿಲ್ಲಾ ಕಲಾಶ್ರೀ ಪ್ರಶಸ್ತಿ'** ವಿಜೇತೆ 2011 ನವಂಬರ್ ನಲ್ಲಿ ಬೆಂಗಳೂರಿನ ಬಾಲಭವನ ಸೊಸೈಟಿ, ಕಬ್ಬನ್ ಪಾರ್ಕನಲ್ಲಿ ಜರುಗಿದ **ರಾಜ್ಯ ಮಟ್ಟದ ಕಲಾಶ್ರೀ ಪ್ರಶಸ್ತಿ** ಸ್ಪರ್ಧೆಯಲ್ಲಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ವಿಭಾಗದಲ್ಲಿ ಭಾಗವಹಿಸಿರುತ್ತಾಳೆ. ಜನೇವರಿ 2012 ರಲ್ಲಿ ಮಂಗಳೂರಿನ ಪಿಲಿಕುಳದ ಧಾಮದಲ್ಲಿ ಜರುಗಿದ ರಾಷ್ಟ್ರ ಮಟ್ಟದ ಬಾಲ ಭಾರತ್ ಸೃಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಸುಗಮ ಸಂಗೀತ ಕಾರ್ಯಕ್ರಮ ನೀಡಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ **'ರಾಷ್ಟ್ರಮಟ್ಟದ ಬಾಲ ಕಲಾವಿದೆ'** ಯಾಗಿರುತಾಳೆ. 2016 ಮತ್ತು 2017 ರಲ್ಲಿ ಚಿಕ್ಕಮಗಳೂರು ಹಾಗೂ ಮೈಸೂರಿನಲ್ಲಿ ಜರುಗಿದ ರಾಜ್ಯಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಿ ಉತ್ತಮ ಹಾರ್ಮೋನಿಯಂ ವಾದಕಿಯಾಗಿ ಪ್ರಶಸ್ತಿ ಪಡೆದಿರುತ್ತಾರೆ.

**ಈ ವರ್ಷದ ಮೈಸೂರು ದಸರಾ 2017 ರ ಕಾರ್ಯಕ್ರಮ " ಯುವ ಸೌರಭ" ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದಿನಾಂಕ: 22-09-2017 ರಂದು ಮೈಸೂರಿನ ಗಾನಭಾರತಿ ವೇದಿಕೆ ಯಲ್ಲಿ ಕು.ರಜನಿ ಕರಿಗಾರ ಇವರು ಶಾಸ್ತ್ರೀಯ / ಸುಗಮ ಸಂಗೀತ ನೀಡುತ್ತಿರುವುದು ಹೆಮ್ಮೆಯ ವಿಷಯ.**

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ನಿನಾದ ಸಂಗೀತ ಪಾಠಶಾಲೆ, ವಿದ್ಯಾರ್ಥಿಗಳು